**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ಸಂಖ್ಯೆಃ 1045/2021**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.

ವಿರುದ್ಧ,

ಆರೋಪಿ/ಗಳು : **ಎ 1. ಮನು ಎಂ.**
ತಂದೆ - ಮಾದಪ್ಪ
ಸುಮಾರು **29** ವರ್ಷ ವಯಸ್ಸು,

**ಎ 2. ಮಧು ಎಂ.**
ತಂದೆ – ಮಾದಪ್ಪ
ಸುಮಾರು **33** ವರ್ಷ ವಯಸ್ಸು,

**ಎ 3. ಮಾದಪ್ಪ**
ತಂದೆ – ಲೇಟ್ ಮಾದಯ್ಯ ಕೆ.ಪಿ.
ಸುಮಾರು **61** ವರ್ಷ ವಯಸ್ಸು,

ಎಲ್ಲರ ವಾಸಃ ಮನೆ ಸಂಃ **671/**ಎ,
**13** ನೇ ಮುಖ್ಯ ರಸ್ತೆ,
ತೊಣಚಿಕೊಪ್ಪಲು ಬಡಾವಣೆ,
**4** ನೇ ಹಂತ,
ಮೈಸೂರು ಸಿಟಿ.

**ದೋಷಾರೋಪಣೆ**

**ಶ್ರೀಮತಿ ನಮ್ರತಾ ಎಸ್. ಹೊಸಮಠ**, ಬಿ.ಎ., ಎಲ್.ಎಲ್.ಬಿ., ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಹುಣಸೂರು ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ

ದಿನಾಂಕ: 02.05.2021 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ, ಹುಣಸೂರು ತಾಲ್ಲೂಕು, ಬಿಳಿಕೆರೆ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕರಿಮುದ್ದನಹಳ್ಳಿ ಗ್ರಾಮದ ಸಾಕ್ಷಿ-1 ರವರು ಸಾಕ್ಷಿ-4 ರವರಿಗೆ ಸೇರಿದ ದೇವಗಳ್ಳಿ ರಸ್ತೆಯಲ್ಲಿರುವ ಚೆನ್ನಾಜಮ್ಮ ಫಾರಂ ಬಳಿ ಕರಿಮುದ್ದನಹಳ್ಳಿ-ದೇವಗಳ್ಳಿ ರಸ್ತೆಯ ಅಂಚಿನಲ್ಲಿ ನಿಂತಿದ್ದಾಗ 1 ರಿಂದ 3ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ ಕಾರಿನ ಮಿರರ್ ಡ್ಯಾಮೇಜ್ ಮಾಡಿದ್ದ ವಿಚಾರದಲ್ಲಿ ದ್ವೇಷದಿಂದ ಸಾಕ್ಷಿ-1 ರವರಿಗೆ ಬೋಳಿಮಗನೆ, ಸೂಳೆಮಗನೆ ಇತ್ಯಾದಿಯಾಗಿ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **504** ಸಹವಾಚಕ ಕಲಂ **34** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

2. ಕೊನೆಯದಾಗಿ, ಮೇಲ್ಕಂಡ ಸ್ಥಳ, ದಿನಾಂಕ, ಮತ್ತು ಸಮಯದಲ್ಲಿ ಅದೇ ವಿಚಾರಕ್ಕೆ ಸಂಬಂಧಪಟ್ಟಂತೆ, 1 ರಿಂದ 3ನೇ ಆರೋಪಿಗಳಾದ ನೀವುಗಳು ಅಪರಾಧ ಎಸಗುವ ಸಮಾನ ಉದ್ದೇಶದಿಂದ, 1ನೇ ಆರೋಪಿಯಾದ ನೀವು ಮಾರಕಾಸ್ತ್ರವಾದ ಕಬ್ಬಿಣದ ರಾಡಿನಿಂದ ಸಾಕ್ಷಿ-1 ರವರ ತಲೆ ಹಿಂಭಾಗಕ್ಕೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ **326** ಸಹವಾಚಕ ಕಲಂ **34** ರ ರೀತ್ಯಾ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿರುತ್ತೀರಿ?

(ಮೇಲ್ಕಂಡ ಆಪಾದನೆಗಳು ಈ ನ್ಯಾಯಾಲಯದ ಸಂಜ್ಞೆಯೊಳಗೆ ಬರುತ್ತಿದ್ದು ಹಾಗೂ ಸದರಿ ಆಪಾದನೆಗಳಿಗೆ ಆರೋಪಿಗಳಾದ ನೀವುಗಳು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.)

**(ನಮ್ರತಾ ಎಸ್. ಹೊಸಮಠ)**

ದಿನಾಂಕಃ **26.05.2025**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**<u>ಸಿ.ಸಿ. ಸಂಖ್ಯೆಃ 1045/2021</u>**

ಫಿರ್ಯಾದಿದಾರರುಃ ಸರ್ಕಾರದ ಪರ ಬಿಳಿಕೆರೆ ಪೊಲೀಸ್ ಠಾಣೆ
ಹುಣಸೂರು ವೃತ್ತ, ಹುಣಸೂರು.

ವಿರುದ್ಧ,

ಆರೋಪಿ/ಗಳು : **ಎ 3. ಮಾದಪ್ಪ**
ತಂದೆ – ಲೇಟ್ ಮಾದಯ್ಯ ಕೆ.ಪಿ.

<u>ಭಾರತೀಯ ದಂಡ ಸಂಹಿತೆ ಕಲಂ **240(2)** ರ ಅಡಿಯಲ್ಲಿ ಆರೋಪಿಯ ಹೇಳಿಕೆ</u>

ಪ್ರಶ್ನೆಃ ನಿಮಗೆ ಈಗ ಓದಿ ಹೇಳಿದ ದೋಷಾರೋಪಣೆ ತಿಳಿಯಿತೆ?

ಉತ್ತರಃ

ಪ್ರಶ್ನೆಃ ತಪ್ಪೊಪ್ಪಿಕೊಳ್ಳುವಿರೋ, ವಿಚಾರಣೆಯಾಗಬೇಕೆನ್ನುವಿರೋ?

ಉತ್ತರಃ

ಮೇಲ್ಕಂಡ ದೋಷಾರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಂಡಿದೆಯೆಂದು ಈ ಮೂಲಕ ದೃಢೀಕರಿಸುತ್ತೇನೆ.

**(ನಮ್ರತಾ ಎಸ್. ಹೊಸಮಠ)**
ದಿನಾಂಕಃ **26.05.2025** ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.